(b) whether Government intends to start the work of construction at the earliest ;

(c) when this work will be completed and the Stadium will be released for public use ?

SMT. RENUKA RAJENDRAN (Minister of State for Sericulture and Youth Services). --

(a) The work of Construction of Stadium at Mandya is not stopped and the work is going on.

(b) The question of starting the work of construction at the earliest does not arise as the work has already been started and under rapid progress.

(c) Completion of the work of Stadium releasing of the same for public use depends upon the contribution to be paid by the public. So far, the public have paid rupees three lakhs in the form of contribution. Still the contribution amount of Rs. 1.8 lakhs is due from the public. The local persons are making efforts to collect the same. The Government after sanctioning its share amount is eager to complete the work early.

ಶ್ರೀ ಎಂ. ಎನ್. ಆತ್ಮಾನಂದ.—ಮಂಡ್ಯದಲ್ಲಿ ಸ್ಟೇಡಿಯಂ ನಿರ್ಮಾಣಕ್ಕಾಗಿ ಸರ್ಕಾರ ಇದುವರೆಗೆ ಎಷ್ಟು ಹಣ ಕೊಟ್ಟಿದೆ ?

ಶ್ರೀಮತಿ ರೇಣುಕಾ ರಾಜೇಂದ್ರನ್.—ಸುಮಾರು ೩ ಲಕ್ಷ ರೂಪಾಯಿಗಳನ್ನು ನಾವು ಈಗಾಗಲೇ ರಿಲೀಸ್ ಮಾಡಿದ್ದೇವೆ.

ಶ್ರೀ ಎಂ. ಎನ್. ಆತ್ಮಾನಂದ.—ಸ್ಟೇಡಿಯಂ ಕೆಲಸ ಶುರುವಾಗಿ ೫-೬ ವರ್ಷಗಳಾಗಿದ್ದರೂ ಕೂಡ ಇನ್ನೂ ಸಾರ್ವಜನಿಕ ವಂತಿಗೆ ೧.೮ ಲಕ್ಷ ರೂಪಾಯಿ ಬರಬೇಕೆಂದು ಹೇಳಿದ್ದೀರಿ. ಇದ್ದರಿಂದ, ಆ ಹಣ ವನ್ನು ಸರ್ಕಾರವೇ ಹಾಕಿ ಜಾಗ್ರತೆ ಕೆಲಸ ಮಾಡಿಸಿಕೊಡಲಿಕ್ಕೆ ಪ್ರಯತ್ನ ಮಾಡುತ್ತದೆಯೆ ?

† ಶ್ರೀಮತಿ ರೇಣುಕಾ ರಾಜೇಂದ್ರನ್.—ಕೆಲಸ ಶೀಘ್ರವಾಗಿ ಆಗಬೇಕೆನ್ನುವುದು ಸರ್ಕಾರದ ಉದ್ದೇಶ. ಆದರೆ ಸಾರ್ವಜನಿಕ ವಂತಿಗೆಯನ್ನು ಸರಿಯಾಗಿ ಸಂಗ್ರಹ ಮಾಡಿಲ್ಲವೆಂದು ನನ್ನ ಗಮನಕ್ಕೆ ಬಂದು ನಾನು ಮಂಡ್ಯಕ್ಕೆ ಇತ್ತೀಚೆಗೆ ಭೇಟಿ ಕೊಟ್ಟಿದಾಗ ಅದಕ್ಕೆ ಸಂಬಂಧಪಟ್ಟ ಸ್ಥಳೀಯರು ಬಂದಿದ್ದರು ಆದಷ್ಟು ಬೇಗ ಸಾರ್ವಜನಿಕ ವಂತಿಗೆಯನ್ನು ವಸೂಲಾಮಾಡಿ ಜಿಲ್ಲಾಧಿಕಾರಿಗಳಿಂದಿಗೆ ಸಹಕರಿಸಬೇಕೆಂದು ನಾನು ಅವರಲ್ಲಿ ಮನವಿ ಮಾಡಿಕೊಂಡೆನಲ್ಲದೆ ಜಿಲ್ಲಾಧಿಕಾರಿಗಳಿಗೂ ಕೂಡ ಸೂಕ್ತ ಆದೇಶ ಕೊಟ್ಟಿದ್ದೇನೆ. ಒಟ್ಟಿನಲ್ಲಿ ಆದಷ್ಟು ಜಾಗ್ರತೆ ಕೆಲಸವನ್ನು ಪೂರ್ಣಗೊಳಿಸುತ್ತೇವೆ.

Supply of Drinking Water from Gayatri Reservoir to Sira Town

349. SRI S. LINGAIAH (Sira).—Will the Minister for Housing and Urban Development be pleased to state :—

(a) whether it has come to the notice of the Government that the public of Sira Town are representing from time to time to provide drinking water from the Gayatri Reservoir ;

(b) the decision of the Government in exploring the posibility of providing drinking water from the said reservoir ;

(c) in case permanent arrangement for supply of drinking water is not to be made, whether the Government considers that it would be possible to supply the water through this reservoir only ;

(b) if possible, when the Government will implement the scheme of supplying water from the reservoir ?

SRI DHARM SINGH (Minister for Housing & Urban Development)—

(a) Yes.

(b) This scheme was dropped due to the increase in the estimated cost and the maintenance charges.

(c) So as to solve the problem of drinking water permanently, Bore Wells are dug, still some more Bore Wells will be dug in some other places also.

(d) This question does not arise in view of reply to clause a, b and c.

ಶ್ರೀ ಎಸ್. ಲಿಂಗಯ್ಯ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಯೋಜನೆಯ ಅಂದಾಜು ವೆಚ್ಚ ಮತ್ತು ನಿರ್ವಣೆಯ ವೆಚ್ಚ ಬಹಳವಾದುದರಿಂದ ಯೋಜನೆಯನ್ನು ಕೈಬಿಡಲಾಗಿದೆ ಎಂದು ಹೇಳಿದ್ದಾರೆ. ಹಾಗಾದರೆ ಆ ಯೋಜನೆಗೆ ತಗಲುವ ವೆಚ್ಚ ಏನು?

† ಶ್ರೀ ಧರ್ಮಸಿಂಗ್.—ಈಗಾಗಲೇ ಶಿರಾ ಟೌನಿಗೆ ಆಗತಕ್ಕ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರ ೧೯೭೧ರಲ್ಲಿ ಒಂದು ಎಸ್ಟಿಮೇಟನ್ನು ಕೂಡ ಮಾಡಿತ್ತು. ಅದು ೫೬ ಲಕ್ಷ ರೂಪಾಯಿ ಎಸ್ಟಿಮೇಟ್ ಇದ್ದ ಕಾರಣ ಅಲ್ಲಿನ ನಗರಸಭೆಯವರು ಅಷ್ಟು ವೆಚ್ಚವನ್ನು ಪಹಿಸಿಕೊಳ್ಳುವುದಕ್ಕಾಗುವುದಿಲ್ಲವೆಂದು ತಿಳಿಸಿದರು. ಪುನಃ ೧೯೭೬ರಲ್ಲಿ ೨೮ ಲಕ್ಷ ರೂಪಾಯಿಗಳ ಒಂದು ಎಸ್ಟಿಮೇಟನ್ನು ಮಾಡಲಾಯಿತು, ಅದನ್ನೂ ಸಹ ಅವರು ಒಪ್ಪಲಿಲ್ಲ. ಆದರೂ ಸಹ ಶಿರಾ ಟೌನಿನಲ್ಲಿರತಕ್ಕ ೨೦ ಸಾವಿರ ಜನಗಳಿಗೆ ತೊಂದರೆಯಾಗದಂತೆ ಇವತ್ತಿನ ದಿವಸ ಇನ್‌ಫಿಲ್ಟ್ರೇಷನ್ ವೆಲ್ ಅನ್ನು ಮತ್ತು ೫ ಬೋರ್‌ವೆಲ್‌ಗಳನ್ನು ಹಾಕಿ ನೀರನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಲಾಗಿದೆ. ಈಗಾಗಲೇ, ಅಂದರೆ ತಮ್ಮ ಪ್ರಶ್ನೆ ಬಂದ ತಕ್ಷಣ ಅಧಿಕಾರಿಗಳ ಜೊತೆ ಮಾತನಾಡಿದಾಗ ಅಲ್ಲಿ ಇನ್ನು ೨ ಬೋರ್‌ವೆಲ್‌ಗಳನ್ನು ತೆಗೆದು ಕೊಳ್ಳಲಾಗುತ್ತಿದೆ, ಎಂದು ತಿಳಿಯಿತು. ಅಲ್ಲದೆ ಇನ್ನೂ ಏನು ವಿದ್ಯುಚ್ಛಕ್ತಿ ಖಾತೆಯ ಅಧಿಕಾರಿಗಳ ಜೊತೆ ಮಾತನಾಡಿ ವ್ಯವಸ್ಥೆ ಮಾಡುವ ಪ್ರಯತ್ನ ಮಾಡುತ್ತಿದ್ದೇವೆ. ಒಟ್ಟಿನಲ್ಲಿ, ಸಧ್ಯಕ್ಕೆ ಯಾವ ತೊಂದರೆಯೂ ಆಗದಂತೆ ನೋಡಿಕೊಳ್ಳುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಲಿಂಗಯ್ಯ.—ಮಾನ್ಯ ಮಂತ್ರಿಗಳು ತೊಂದರೆಯಾಗದೇ ಇರುವ ರೀತಿ ನೋಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ೫ ಬೋರ್‌ವೆಲ್‌ಗಳನ್ನು ಏನು ಹಾಕಿದ್ದೇವೆಂದು ಹೇಳಿದ್ದಾರೆ ಅದರಲ್ಲಿ ೨ ಬೋರ್‌ವೆಲ್‌ಗಳು ಕೆಲಸ ಮಾಡುತ್ತಿಲ್ಲ. ಇನ್ನು ೩ ಬೋರ್‌ವೆಲ್‌ಗಳಲ್ಲಿ ೯೦೦ ಗ್ಯಾಲನ್ ಮಾತ್ರ ನೀರು ಬರುತ್ತಿದೆ. ಇವತ್ತು ಅಲ್ಲಿಗೆ ೨೦-೨೫ ಸಾವಿರ ಗ್ಯಾಲನ್ ನೀರು ಬೇಕಾಗಿದೆ. ಆದ್ದರಿಂದ ಸರ್ಕಾರದವರು ಎಷ್ಟು ಬೋರ್‌ವೆಲ್‌ಗಳನ್ನು ಹಾಕಿದರೂ ಅಷ್ಟು ನೀರನ್ನು ಒದಗಿಸುವುದಕ್ಕಾಗುವುದಿಲ್ಲ. ಒಂದೊಂದು ಬೋರ್‌ವೆಲ್‌ಗೂ ೫೦ ರಿಂದ ೬೦ ಸಾವಿರ ರೂಪಾಯಿವರೆಗೆ ವಿಚ್ರ್ಚು ಮಾಡಿದ್ದಾರೆ. ಈ ರೀತಿ ಮಾಡುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಗಾಯತ್ರಿ ಜಲಾಶಯದಿಂದ ನೀರನ್ನು ಒದಗಿಸುವ ವ್ಯವಸ್ಥೆಯನ್ನು ಕೂಡಲೇ ಮಾಡುವ ವಿಚಾರವನ್ನು ಪರಿಶೀಲಿಸುತ್ತೀರಾ?

ಶ್ರೀ ಧರ್ಮಸಿಂಗ್.—ಮಾನ್ಯ ಅಧ್ಯಕ್ಷರೇ, ಎಲ್ಲೆಲ್ಲಿ ಈ ಕುಡಿಯುವ ನೀರಿನ ತೊಂದರೆಯಿದೆ ಅಲ್ಲೆಲ್ಲಾ ಶಾಶ್ವತವಾದ ಪರಿಹಾರವನ್ನು ಹುಡುಕಬೇಕು ಎಂಬ ಧೋರಣೆ ಸರ್ಕಾರಕ್ಕಿದೆ. ಈಗಾಗಲೇ

ಹೇಳಿದಂತೆ ಸರ್ಕಾರ ಮಾಡಿದಂಥ ೫೬ ಲಕ್ಷ ರೂಪಾಯಿ ಎಸ್ಟಿಮೇಟನ್ನು ಅಲ್ಲಿನ ಮುನಿಸಿಪಾಲಿಟಿ ಯವರು ಒಪ್ಪಲಿಲ್ಲ. ಒಟ್ಟಿನಲ್ಲಿ ಅಲ್ಲಿ ಕುಡಿಯುವ ನೀರಿನ ತೊಂದರೆಗೆ ಶಾಶ್ವತವಾದ ಪರಿಹಾರ ವನ್ನು ಮಾಡುವ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎಸ್. ಲಿಂಗಯ್ಯ.—ಕೊಳವೆ ಭಾವಿಯಿಂದ ನೀರನ್ನು ಒದಗಿಸುವುದು ಬಹಳ ಕಷ್ಟದ ಕೆಲಸ ಎಂದು ಎಲ್ಲರಿಗೂ ಮನವರಿಕೆಯಾಗಿದೆ. ಮುನಿಸಿಪಾಲಿಟಿಯವರು ಹಣವನ್ನು ಒದಗಿಸುವುದಕ್ಕಾಗು ವುದಿಲ್ಲ ಎಂದು ಅರ್ಥ ಬರುವ ರೀತಿಯಲ್ಲಿ ಮಾನ್ಯ ಮಂತ್ರಿಗಳು ಉತ್ತರ ನೀಡಿದ್ದಾರೆ. ೧೯೭೧ನೇ ಸೆನ್ಸಸ್ ಪ್ರಕಾರ ೨೦ ಸಾವಿರ ಜನಸಂಖ್ಯೆ ಇರುವ ಜಾಗಗಳನ್ನು ಸರ್ಕಾರ, ಗ್ರಾಮಾಂತರ ನೀರು ಸರ ಬರಾಜು ಯೋಜನೆಯೊಳಗೆ ಒಳಪಡಿಸಿ ಕಾರ್ಯಕ್ರಮವನ್ನು ರೂಪಿಸುವುದಕ್ಕೆ ಅವಕಾಶ ಇದೆ. ಆ ದೃಷ್ಟಿ ಯಿಂದ ಗಾಯಿತ್ರಿ ಜಲಾಶಯದಿಂದ ನೀರನ್ನು ಒದಗಿಸುವ ವ್ಯವಸ್ಥೆ ಮಾಡಬೇಕೆಂದು ಒತ್ತಾಯ ಮಾಡು ತ್ತೇನೆ.

ಶ್ರೀ ಧರ್ಮಸಿಂಗ್.—ಇವರು ಕೊಟ್ಟಿರುವ ಸಲಹೆಯ ಬಗೆ ಗಮನಹರಿಸಿ ಸೂಕ್ತವಾದ ಕ್ರಮ ವನ್ನು ತೆಗೆದುಕೊಳ್ಳುವ ಭರವಸೆಯನ್ನು ಕೊಡುತ್ತೇನೆ.

Chief Sugar-Cane Development Officer at Mahadeswara Co-operative Sugar Mills.

386. SRI G. RAJU GOWDA (Hanur).—Will the Minister for Co-operation be pleased to state.—

(a) whether it is not a fact that an officer from the Agricultural University has been appointed as Chief Sugar Cane Development Officer at Mahadeswara Co-operative Sugar Factory ;

(b) the grounds on which his services were barrowed ;

(c) the reasons for sending him back ;

(d) who is looking after his duties at present ?

SRI A. B. JAKANUR (Minister for Co-operation).—

(a) Yes.

(b) On deputation basis.

(c) The factory authorities have not executed any type of agreement in obtaining his services for 5 years and the Chief Sugar Cane Development Officer has also not executed any agreement to the effect that he would serve for five years. Taking all these points into consideration he is sent back to Agricultural University as he is having a lien on a permanent post in the Agricultural University.

(d) Sri Ramakrishna, Cane Development Officer is discharging the duties of the Chief Sugar Cane Development Officer.

ಶ್ರೀ ಜಿ. ರಾಜುಗೌಡ.— ಸ್ವಾಮಿ, ಮಹದೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲೇ ಕಬ್ಬು ಅಭಿವೃದ್ಧಿ ಅಧಿಕಾರಿ ಇದ್ದರೂ ಕೂಡ ಕೃಷಿ ವಿಶ್ವವಿದ್ಯಾನಿಲಯದಿಂದ ಬೇರೊಬ್ಬರನ್ನು ಕರೆಸಿಕೊಂಡು ಅವರ ಸೇವೆಯನ್ನು ಎರವಲು ಪಡೆಯುವುದಕ್ಕೆ ಕಾರಣವೇನು?